**ಸಾಕ್ಷಿಯನ್ನು ದಿಃ *08/04/2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಎದುರುದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಆರ್.3** | ಅಧಿಕಾರ ಪತ್ರ |
| **ನಿ.ಆರ್.4** | ವಿಮೆ ಪ್ರತಿ |
| **ನಿ.ಆರ್.5** | ಪಿ.ಎಂ.ವರದಿಯ ದೃಢಿಕೃತ ನಕಲು |
| **ನಿ.ಆರ್.6** | ಮಾಹಿತಿ ಹಕ್ಕು ಅಧಿನಿಯಮದಲ್ಲಿ ಕೇರಳ ಆರಟಿಓದವರು ನೀಡಿರುವ ಮಾಹಿತಿ |
| ನಿ.ಆರ್.7 | ದಿಃ20-08-2025 ರಂದು 1 ನೇ ಅರ್ಜಿದಾರರು ನೀಡಿರುವ ಪಿ.ಎ ಕ್ಲೇಮ |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅರ್ಜಿಯನ್ನು ವಜಾ ಮಾಡಬೇಕಾಗಿ ವಿನಂತಿ.

***ಪಾಟೀ ಸವಾಲು ಃ ಅರ್ಜಿದಾರರ ಪರ ವಕೀಲರಿಂದ.***

ಅಪಘಾತವನ್ನು ನಾನು ನೋಡಿಲ್ಲ ಎಂದರೆ ನಿಜ. ಪೊಲೀಸ ದಾಖಲಾತಿಗಳ ಮೇಲೆ ನನ್ನ ನುಡಿ ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ನಿಜ. ಸಾಮಾನ್ಯವಾಗಿ ಪ್ರಮಾಣಪತ್ರದಲ್ಲಿ ಸಣ್ಣ ಪುಟ್ಟ ಬೆರಳಚ್ಚು ತಪ್ಪುಗಳು ಆಗುವುದು ಸ್ವಾಭಾವಿಕ ಎಂದರೆ ನಿಜ. ಅದರಂತೆ ಅರ್ಜಿದಾರರ ಅರ್ಜಿಯ 9 ನೇ ಖಂಡಿಕೆಯಲ್ಲಿ ಅಪರಾಧ ಸಂಖ್ಯೆ 26/25 ಎಂದು ನಮೂದಿಸಲಾಗಿದೆ ಎಂದರೆ ನಿಜ. ಅದರಂತೆ 14(ಎ) ಖಂಡಿಕೆಯಲ್ಲಿ ಲಾರಿ ನಂಬರ ಕೆಎಲ 39/ಟಿ5730 ಎಂದು ನಮೂದು ಇರುತ್ತದೆ ಎಂದರೆ ನಿಜ. ಅದರಂತೆ ಮೂರನೇ ಪುಟದ 22 ನೇ ಖಂಡಿಕೆಯಲ್ಲಿ ಇದೇ ನಂಬರ ನಮೂದು ಆಗಿರುತ್ತದೆ ಎಂದರೆ ನಿಜ. ಮುಂದುವರೆದು ಅದೇ ಖಂಡಿಕೆಯಲ್ಲಿ ಅರ್ಜಿದಾರರು ಸದರಿ ವಾಹನದ ನಂಬರ ಕೆಎಲ 39/ಟಿ 5730 ಎಂದು ಬರೆಯಲಾಗಿದೆ ಎಂದರೆ ನಿಜ.

ಪ್ರವವ, ಅಂತಿಮ ವರದಿಯಲ್ಲಿ ನಮೂದಿಸಿರುವ ವಾಹನದ ವಿಮೆ ಅಪಘಾತದ ಸಮಯಕ್ಕೆ ಚಾಲ್ತಿಯಲ್ಲಿತ್ತು ಎಂದು ಒಪ್ಪಿದು ನಿಜವಿರುತ್ತದೆ. ಸದರಿ ಕೇರಳ ಮೂಲದ ಲಾರಿಯ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಪತ್ರವಿರುತ್ತದೆ ಎಂದರೆ ನಿಜ. ಅದರಂತೆ ಸದರಿ ಲಾರಿಯ ಫರ್ಮಿಟ ಸಹ ಸೂಕ್ತವಿದೆ ಎಂದರೆ ನಿಜ. ಅಪಘಾತದ ದಿಃ17-03-2025 ಎಂದರೆ ನಿಜ. ಆ ದಿನಾಂಕದಂದು ಚಾಲನಾ ಪರವಾನಿಗೆ ಪತ್ರ, ಫರ್ಮಿಟ ಮತ್ತು ಎಫಸಿ ವ್ಯಾಲಿಡ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇರುತ್ತದೆ ಆದರೆ ಆ ದಿನಾಂಕದಂದು ಆತೋರಾಯಷೇಜನ ಸರ್ಟಿಫಿಕೇಟ ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಪ್ರಮಾಣಪತ್ರಕ್ಕೆ ಮತ್ತು ಪ್ರಕರಣದ

ವಿಷಯ ಸಂಗತಿಗೆ ಸಂಬಂಧವಿಲ್ಲ ಮತ್ತು ಸದರಿ ವಿಷಯ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ಸಂಬಂಧಪಟ್ಟ ಸರಕಾರದ ಆನಲೈನ ಪ್ರತಿಯಲ್ಲಿ ಫರ್ಮಿಟ ದಿಃ28-05-2028 ರವರೆಗೆ ಊರ್ಜಿತ ವಿರುತ್ತದೆ ಮತ್ತು ನ್ಯಾಷನಲ್ ಫರ್ಮಿಟ 28-05-2028 ರವರೆಗೆ ಊರ್ಜಿತವಿರುತ್ತದೆ ಎಂದು ಕೊಡಲಾಗಿದೆ ಎಂದರೆ ಸರಿಯಲ್ಲ. ಮಾಹಿತಿ ಹಕ್ಕು ನಿಯಮದಡಿಯಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಆತೋರೆಷಜನ ಸರ್ಟಿಫಿಕೇಟ ಕೊಡಬೇಕು ಎಂದು ಕೇಳಿದ್ದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ದಿನಾಂಕ ಪ್ರತ್ಯೇಕವಾಗಿ ನಮೂದು ಮಾಡಲಾರದ ಕಾರಣ ಇತ್ತೀಚಿನ ಸ್ಥಿತಿ ನಮೂದಿಸಿ ಅದನ್ನು ಮಾಹಿತಿ ಹಕ್ಕು ಅಧಿನಿಯಮದಲ್ಲಿ ನಮೂದಿಸಿದೆ ಎಂದರೆ ಸರಿಯಲ್ಲ. ಅಪಘಾತ ದಿನಾಂಕದಂದು ವಿಮೆ ವಾಹನದ ಎಲ್ಲ ನಿಯಮಗಳು ಊರ್ಜಿತವಿದ್ದರು ಸಹ ಅಪಘಾತದ ದಿನಾಂಕ ನಮೂದಿಸಿದೆ ಮಾಹಿತಿ ಹಕ್ಕಿನಲ್ಲಿ ಇತ್ತೀಚಿನ ವರದಿ ಹಾಜರುಪಡಿಸಿ ಪರಿಹಾರ ಹಣದ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಈ ರೀತಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ವಿಮೆಯುಳ್ಳ ವಾಹನದ ಚಾಲಕನ ವಿರುದ್ಧ ಕಲಂ 185 ರ ಅಡಿಯಲ್ಲಿ ದೋಷಾರೋಪಣೆ ಮಾಡಿಲ್ಲ ಎಂದರೆ ನಿಜ. ನಾನೇ ಹಾಜರುಪಡಿಸಿರುವ ನಿ.ಆರ್.5 ರಂತೆ ಇರುವ ಶವ ಪರೀಕ್ಷೆಯಲ್ಲಿ ಹೊಟ್ಟೆ ಭಾಗದಲ್ಲಿ ಯಾವುದೇ ಮದ್ಯಪಾನ ವಾಸನೆ ಬರುತ್ತಿಲ್ಲ ಎಂದು ನಮೂದು ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಹಾಗೇ ತಪ್ಪು ನಮೂದಿಸಿದೆ ಎಂದು ಉತ್ತರಿಸುತ್ತಾರೆ. ಈ ರೀತಿ ಯಾವುದೇ ನಮೂದು ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ನಮ್ಮ ವಿಮೆ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಅಪಘಾತ ಸ್ಥಳ ಹುಬ್ಬಳ್ಳಿ ಧಾರವಾಡ ಬೈಪಾಸ ರಸ್ತೆ ಇರುತ್ತದೆ ಎಂದರೆ ನಿಜ. ಸದರಿ ರಸ್ತೆಯ ಅಗಲ 62 ಫೂಟು ಅಗಲವಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಿಮೆಯುಳ್ಳ ವಾಹನ ಹುಬ್ಬಳ್ಳಿ ಕಡೆಯಿಂದ ಬರುತಿತ್ತು ಎಂದರೆ ನಿಜ. ಸದರಿ ನಿ.ಪಿ.2 ರ ಪ್ರಕಾರ ಮೋಟಾರುಸೈಕಲ ಚಾಲಕ ಹುಬ್ಬಳ್ಳಿ ಕಡೆಗೆ ರಸ್ತೆಯಲ್ಲಿ ಎಡ ಬದಿಯಿಂದ ಹೋಗುತ್ತಿದ್ದ ಎಂದರೆ ಸರಿಯಲ್ಲ. ಸದರಿ ವಿಷಯ ಸಂಗತಿ ನಕಾಶೆಯಲ್ಲಿ ಸ್ಪಷ್ಟವಾಗಿ ಕಂಡರು ಸಹ ಅದನ್ನು ಅಲ್ಲಗಳೆದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಬ್ಬಳ್ಳಿಯಿಂದ ಬರುವ ನಮ್ಮ ವಿಮೆ ವಾಹನ ತನ್ನ ಎಡಗಡೆಯಿಂದ ಬರಬೇಕು ಎಂದರೆ ನಿಜ. ಸದರಿ ನಕಾಶೆ ಪ್ರಕಾರ ಹುಬ್ಬಳ್ಳಿಯಿಂದ ಬರುವ ವಾಹನಗಳು ಎಡಗಡೆ ತಿರುವು ತೆಗೆದುಕೊಳ್ಳಬೇಕು ಎಂದು ಸೂಚನಾ ಫಲಕವಿರುತ್ತದೆ ಎಂದರೆ ನಿಜ. ಹೀಗೆ ಇದ್ದರೂ ಸಹ ಎಡಗಡೆ ಹೋಗಬೇಕಾದ ವಾಹನ ಬಲ ತಿರುವು ಪಡೆದುಕೊಂಡಿದಕ್ಕೆ ಸದರಿ ಅಪಘಾತಕ್ಕೆ ಕಾರಣವಾಯಿತು ಎಂದರೆ

ಸರಿಯಲ್ಲ. ಸದರಿ ಸೂಚನಾ ಫಲಕವಿದ್ದರೂ ಸಹ ಆ ಸೂಚನೆ ಪಾಲಿಸದೆ ಬಲ ತಿರುವು ಪಡೆದಿರುವ ಕಾರಣ ಅಪಘಾತವಾಯಿತು ಹೊರತು ಮೋಟಾರುಸೈಕಲ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಶವ ಪಂಚನಾಮೆಯಲ್ಲಿ ಮದ್ಯಪಾನದ ಕುರಿತು ಯಾವುದೇ ರೀತಿ ಉಲ್ಲೇಖವಿರದೇ ಇದ್ದರೂ ಸಹ ಪರಿಹಾರ ಹಣ ತಪ್ಪಿಸುವ ಸಲುವಾಗಿ ನಾನು ನಿ.ಆರ್.5 ರಂತೆ ಇರುವ ವರದಿಯನ್ನು ತಪ್ಪಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನೇ ಹಾಜರುಪಡಿಸಿರುವ ನಿ.ಆರ್.4 ರಂತೆ ಇರುವ ನಮ್ಮ ವಿಮೆ ಪಾಲಿಸಿಯಲ್ಲಿ ಮದ್ಯಪಾನ ಸೇವಿಸಿದರೆ ವಿಮೆ ಷರತ್ತು ಉಲ್ಲಂಘನೆ ಮಾಡಿದಂತೆ ಎಂದು ನಮೂದು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನೋಡಿ ಸದ್ಯಕ್ಕೆ ಸಿಗುತ್ತಿಲ್ಲ, ಆದರೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಇದ್ದರೂ ಸುಳ್ಳು ಪ್ರಮಾಣಪತ್ರದ ಮೂಲಕ ಸರಿಯಾದ ದಾಖಲಾತಿಗಳನ್ನು ನೀಡದೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆಗಳು ಸರಿಯಲ್ಲ.

***ಪಾಟೀ ಸವಾಲು : ಶ್ರೀ ಬಿಕೆಎಸ ವಕೀಲರಿಂದ 3 ಮತ್ತು 4 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.